<u>ದಿಃ 13.02.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ ಆರ್.ವಿ.ಜಿ. ವಕೀಲರಿಂದ</u>

ಲೋಕೇಶ ರವರು ಏನು ತಕರಾರು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಸುಮ್ಮನೆ ನಿಂತಿರುತ್ತಾರೆ. ದಿನಾಂಕ 31.07.2008 ರಲ್ಲಿ ಲೋಕೇಶ ರವರು ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿದ್ದರು ಎಂದು ಹೇಳಿದ್ದು ಅವರು ಸ.ನಂ 228 ರಲ್ಲಿ 1 ಎಕರೆ 19 ಗುಂಟೆಯನ್ನು ತೆಗೆದುಕೊಂಡಿದ್ದರು, ಅಸೆಸ್ ಮೆಂಟ್ ನಂಬರ್ 3/2 ರಲ್ಲಿ 6.6 ಮೀಟರ್ ಹಾಗೂ 7.7 ಮೀಟರ್ ಗಳನ್ನು ಅವರು ತೆಗೆದುಕೊಂಡು ಉಳಿದ ಅಸ್ತಿಗಳಲ್ಲಿ ನಮಗೆ ಭಾಗ ಬೇಡ ಎಂದು ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿದ್ದರು

2) ಸ.ನಂ.228 ವರವಣಿ ಗ್ರಾಮಕ್ಕೆ ಸೇರಿದ ಆಸ್ತಿಯಾಗಿರುತ್ತದೆ. ನಿಶಾನೆ ಪಿ 134 ರಲ್ಲಿ ಉಪ್ಪಾರಹಳ್ಳಿ ಗ್ರಾಮದ ಸ.ನಂ.228 ಎಂದು ಇರುತ್ತದೆ. ಅಸೆಸ್ ಮೆಂಟ್ ನಂ 3/2 ಕೂಡ ಉಪ್ಪಾರಹಳ್ಳಿ ಗ್ರಾಮಕ್ಕೆ ಸೇರಿದ ಆಸ್ತಿಯಾಗಿರುತ್ತದೆ. ಸದರಿ ಹಕ್ಕು ನಿವೃತ್ತಿ ಪತ್ರದ ಪ್ರಕಾರ ಅವರ ಹೆಸರಿಗೆ ಪಹಣಿ ಪತ್ರಿಕೆಯಾಗಿರುತ್ತದೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ನಿಶಾನೆ ಪಿ 134 ರಲ್ಲಿರುವ ಆಸ್ತಿಯನ್ನು ಈ ದಾವೆಯಲ್ಲಿ ಅನುಸೂಚಿ 1 ಮತ್ತು 6 ಎಂದು ಮಾಡಿರುತ್ತೇನೆ ಎಂದರೆ ಸರಿ. ಪ್ರತಿವಾದಿ 3 ರವರು ಕೂಡ ಎಲ್ಲಾ ಆಸ್ತಿಯಲ್ಲೂ ಭಾಗ ಬೇಕು ಎಂದು ಪ್ರತಿವಾದ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಸುಮ್ಮನೆ ನಿಂತಿರುತ್ತಾರೆ.

3) ನಾನು, 1 ನೇ ಪ್ರತಿವಾದಿ ಹಾಗೂ 2 ನೇ ಪ್ರತಿವಾದಿಯವರು ಸೇರಿಕೊಂಡು ಎಲ್ಲಾ ಆಸ್ತಿಯಲ್ಲೂ ಭಾಗ ಕೊಡಬೇಕಾಗುತ್ತದೆ ಎಂದು ಹೇಳಿ ನಿಶಾನೆ ಪಿ 134 ರಲ್ಲಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅವರಿಗೆ ಯಾವುದೇ ರೀತಿಯಾದ ಆಸ್ತಿಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ ಸಿ.ಎಂ. ವಕೀಲರಿಂದ</u>

ಪ್ರತಿವಾದಿ 4 ಮತ್ತು 5 ರವರು ನಮ್ಮ ತಂದೆಯ ಕಡೆಯಿಂದ ಆಸ್ತಿಗಳನ್ನು ಎಲ್ಲಾ ಈ ದಾವೆ ಸಲ್ಲಿಸಿದ ನಂತರ ಮಾಡಿಸಿಕೊಂಡಿರುತ್ತಾರೆ ಆದ್ದರಿಂದ ಅವರನ್ನು

ಪಕ್ಷಗಾರರನ್ನಾಗಿ ಮಾಡಿರುತ್ತಾರೆ. ನನ್ನ ತಂದೆಯವರು ಸ್ವಯಾರ್ಜಿತ ಆಸ್ತಿಯನ್ನು ಪ್ರತಿವಾದಿ 4 ಮತ್ತು 5 ರವರಿಗೆ ಮಾರಾಟ ಮಾಡಿಕೊಟ್ಟಿರುತ್ತಾರೆ.

ಮರು ವಿಚಾರಣೆಃ ಇಲ್ಲ.

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-
ಹಿರಿಯ ಶ್ರೇಣಿ ನ್ಯಾಯಾಧೀಶರು
ಗೌರಿಬಿದನೂರು.

ಸಾಕ್ಷಿಗೆ ನ್ಯಾಯಾಲಯದಲ್ಲಿರುವ ಎಲ್ಲಾ ದಾಖಲೆಗಳನ್ನು ನೀಡಿ ಅವರು ಗುರುತಿಸುವ ವಿಚಾರಗಳನ್ನು ಹಾಗೂ ಅವರು ಹೇಳುವ ವಿಚಾರಗಳನ್ನು ನ್ಯಾಯಾಲಯವು ಬರೆದುಕೊಳ್ಳಲಾಗುವುದು ಎಂದು ಅವರಿಗೆ ತಿಳಿಸಿ ಅವರು ಸಾಕ್ಷಿ ನುಡಿಯಲು ಕೋರಲಾಗಿರುತ್ತದೆ.